ಚುಕ್ಕೆ ಗುರುತಿಲ್ಲದ ಪ್ರಶ್ನೆ 29 : 89

ಸದಸ್ಯರ ಹೆಸರು : ಶ್ರೀ ಹೆಚ್. ಡಿ. ಕುಮಾರಸ್ವಾಮಿ (ರಾಮನಗರ)

ಉತ್ತರಿಸುವ ಸಚಿವರು : ಡಾ|| ವಿ. ಎಸ್. ಆಚಾರ್ಯ (ಗೃಹ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
1.	ಹೊಸ ಸರ್ಕಾರ ರಚನೆಯಾದ ಸಂದರ್ಭದಲ್ಲಿ ಮಂತ್ರಿ ಮಂಡಲ ರಚನೆಗೆ ಸಂಬಂಧ ಪಟ್ಟಂತೆ ನಡೆಸಿದ ದೊಂಬಿ, ಗಲಾಟೆ ಹಾಗೂ ಬಸ್ಸು ಸುಟ್ಟ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ?	ಹೌದು, ಸರ್ಕಾರ ಗಂಭೀರವಾಗಿ ಪರಿಗಣಿಸಿದೆ.
2.	ಹಾಗಿದ್ದಲ್ಲಿ, ಆ ದೊಂಬಿ, ಗಲಾಟೆ ಮತ್ತು ಬಸ್ಸು ಸುಟ್ಟ ದುಷ್ಕರ್ಮಿಗಳನ್ನು ಸರ್ಕಾರ ಬಂದಿಸಿದೆಯೇ?	ಬೆಂಗಳೂರು ಜಿಲ್ಲೆ ಮತ್ತು ಹುಬ್ಬಳ್ಳಿ - ಧಾರವಾಡ ನಗರಗಳಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. 1. ಬೆಂಗಳೂರು ಜಿಲ್ಲೆಯಲ್ಲಿ 03(ಮೂರು) ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ. 2. ಹುಬ್ಬಳ್ಳಿ-ಧಾರವಾಡ ನಗರದಲ್ಲಿನ ಪ್ರಕರಣಗಳಲ್ಲಿ ಯಾರನ್ನು ಬಂಧಿಸಿರುವುದಿಲ್ಲ.
3.	ಹಾಗಿದ್ದಲ್ಲಿ, ಆ ದುಷ್ಕರ್ಮಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?	ದುಷ್ಕರ್ಮಿಗಳನ್ನು ಪತ್ತೆ ಹಚ್ಚಿದ ನಂತರ ಅವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು. ಹೆಬ್ಬಗೋಡಿ ಪೊ.ಠಾ.ವೊ.ಸಂ.116/2008ರ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿದೆ.
4.	ಸಾರ್ವಜನಿಕರ ಆಸ್ತಿ-ಪಾಸ್ತಿಗಳಿಗೆ ನಷ್ಟ ಉಂಟು ಮಾಡಿದ ಇಂತಹ ಪ್ರಕರಣಗಳು ರಾಜ್ಯದಲ್ಲಿ ಎಲ್ಲೆಲ್ಲಿ ವರದಿಯಾಗಿವೆ? ಈ	ಸಾರ್ವಜನಿಕರ ಆಸ್ತಿ-ಪಾಸ್ತಿಗಳಿಗೆ ನಷ್ಟ ಉಂಟು ಮಾಡಿದ ಇಂತಹ ಪ್ರಕರಣಗಳು ಹುಬ್ಬಳ್ಳಿ-ಧಾರವಾಡ ನಗರ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ವರದಿಯಾಗಿರುತ್ತದೆ. ಹುಬ್ಬಳ್ಳಿ-ಧಾರವಾಡ ನಗರದಲ್ಲಿ ನಾಲ್ಕು ಪ್ರಕರಣಗಳು ಹಾಗೂ

	ಸಂದರ್ಭದಲ್ಲಿ ಆದ ಅಂದಾಜು ನಷ್ಟವೆಷ್ಟು? (ವಿವರಗಳನ್ನು ನೀಡುವುದು)	ಬೆಂಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಆರು ಪ್ರಕರಣಗಳು ದಾಖಲಾಗಿರುತ್ತದೆ. ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಅಂದಾಜು ರೂ.6,03,100/- ನಷ್ಟವಾಗಿದೆ. ಹಾಗೂ ಬೆಂಗಳೂರು ಜಿಲ್ಲೆಯಲ್ಲಿ 2,17,000-00 ರೂಪಾಯಿ ಒಟ್ಟು 8,30,100/- ರೂ. ನಷ್ಟವಾಗಿರುತ್ತದೆ.
5.	ಈ ಪ್ರಕರಣಗಳಲ್ಲಿ ಸರ್ಕಾರ ದುಷ್ಕರ್ಮಿಗಳ ವಿರುದ್ಧ ಯಾವ ಕ್ರಮಗಳನ್ನು ಜರುಗಿಸಿದೆ? (ವಿವರಗಳನ್ನು ನೀಡುವುದು)	ದುಷ್ಕರ್ಮಿಗಳನ್ನು ಪತ್ತೆ ಹಚ್ಚುವ ಬಗ್ಗೆ ತನಿಖೆ ನಡೆಯುತ್ತಿದೆ. ಪತ್ತೆಯಾದ ನಂತರ ಕ್ರಮ ಜರುಗಿಸಲಾಗುವುದು. ಪತ್ತೆಯಾದ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು.
6.	ಈ ಪ್ರಕರಣಗಳಲ್ಲಿ ನಷ್ಟಕ್ಕೊಳಗಾದವರಿಗೆ ಸರ್ಕಾರ ಪರಿಹಾರ ನೀಡಿದೆಯೇ?	ಪರಿಹಾರ ನೀಡಿರುವುದಿಲ್ಲ.
7.	ಹಾಗಿದ್ದಲ್ಲಿ, ಯಾವ ಪ್ರಮಾಣದಲ್ಲಿ ನೀಡಲಾಗಿದೆ? (ವಿವರಗಳನ್ನು ನೀಡುವುದು)	ಉದ್ಭವಿಸುವುದಿಲ್ಲ.